# ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಬೈ ಕರ್ನಾಟಕದ ಮಹಿಳೆಯರ ಪಾತ್ರ

**ಶ್ರೀದೇವಿ**
ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ನರಗುಂದ.

DOI: https://doi.org/10.5281/zenodo.17411817

## ABSTRACT:

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಬೈ ಕರ್ನಾಟಕದ ಮಹಿಳೆಯರ ಪಾತ್ರ ಅನನ್ಯ ಮತ್ತು ಅಗಾಧ. ಈ ಪ್ರಬಂಧವು ಕಿತ್ತೂರು ರಾಣಿ ಚೆನ್ನಮ್ಮ ಮತ್ತು ರಾಣಿ ಅಬ್ಬಕ್ಕ ದೇವಿಯರ ಆರಂಭಿಕ ಪ್ರತಿರೋಧದಿಂದ ಮೊದಲುಗೊಂಡು, ಗಾಂಧೀಜಿಯವರ ನೇತೃತ್ವದ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಉಮಾಬಾಯಿ ಕುಂದಾಪುರ, ಬಳ್ಳಾರಿ ಸಿದ್ದಮ್ಮ, ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋಧರಮ್ಮ ದಾಸಪ್ಪ ಮತ್ತು ಬೀದರ್‌ನ ಸೈದಾಬಿಯಂತಹ ಧೀರ ಹೋರಾಟಗಾರ್ತಿಯರ ಕೊಡುಗೆಯನ್ನು ಪರಿಶೀಲಿಸುತ್ತದೆ. ಮಹಿಳೆಯರು ಅಹಿಂಸಾತ್ಮಕ ಚಳುವಳಿ, ಖಾದಿ ಪ್ರಚಾರ, ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಈ ಹೋರಾಟದಲ್ಲಿ ಅವರು ಜೈಲುವಾಸ, ಸಾಮಾಜಿಕ ನಿಂದನೆ ಮತ್ತು ಕೌಟುಂಬಿಕ ಸಂಕಷ್ಟಗಳನ್ನು ಅನುಭವಿಸಿದರು. ಈ ಲೇಖನವು ಅವರ ತ್ಯಾಗ, ಧೈರ್ಯ ಮತ್ತು ನಿಸ್ವಾರ್ಥ ದೇಶಭಕ್ತಿಯನ್ನು ಇಂದಿನ ಪೀಳಿಗೆಗೆ ಸ್ಫೂರ್ತಿಯಾಗಿಸಲು ಪ್ರಯತ್ನಿಸುತ್ತದೆ, ಜೊತೆಗೆ ಸ್ವಾತಂತ್ರ್ಯಾನಂತರದ ಸಮಾಜ ಸುಧಾರಣೆ ಮತ್ತು ರಾಜಕೀಯ ಪಾತ್ರವನ್ನೂ ಪ್ರಸ್ತಾಪಿಸುತ್ತದೆ.

## KEYWORDS:

ಮುಂಬೈ ಕರ್ನಾಟಕ ಮಹಿಳೆಯರು, ಸ್ವಾತಂತ್ರ್ಯ ಚಳುವಳಿ, ರಾಣಿ ಚೆನ್ನಮ್ಮ, ಉಮಾಬಾಯಿ ಕುಂದಾಪುರ, ತ್ಯಾಗ ಮತ್ತು ದೇಶಭಕ್ತಿ.

**ಪೀಠಿಕೆ :**

**ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ**
**ಪೆಣ್ಣಲ್ಲವೇ ನಮ್ಮನ್ನೆಲ್ಲ ಪೊರೆದವಳು.**

16ನೇ ಶತಮಾನದ ಸಂಚಿ ಹೊನ್ನಮ್ಮಳ ಈ ಜನಪದ ಪದ್ಯ ಎಂದೆಂದಿಗೂ ಪ್ರಸ್ತುತ. ಮಹಿಳೆ ಎಂದರೆ ಬದುಕು, ಮಹಿಳೆಯೆಂದರೆ ಬೆಳಕು. ಆಕೆ ಸ್ಫೂರ್ತಿಯೂ ಹೌದು, ಜ್ಯೋತಿಯೂ ಹೌದು. ಆಕೆ ತ್ಯಾಗ, ಮಮತೆ, ವಾತ್ಸಲ್ಯ, ಒಲುಮೆಯ ಸಾಗರವೂ ಹೌದು, ತನ್ನೊಡನಾಡಿಗಳ ಬದುಕನ್ನು ಹಸನುಗೊಳಿಸುವ ಜೀವನದಿಯೂ ಹೌದು. ತೊಟ್ಟಿಲನ್ನು ತೂಗುವ ಕೈ, ಜಗತ್ತನ್ನೇ ತೂಗಬಲ್ಲದು ಎಂಬುದಕ್ಕೆ ಪರ್ಯಾಯವಾಗಿ ನಮ್ಮ ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಬೈ ಕರ್ನಾಟಕದ ಮಹಿಳೆಯರ ಪಾತ್ರ ಅಗಾಧವಾದುದು. ಆಂಗ್ಲರ ವಿರುದ್ಧದ ಈ ಸಂಗ್ರಾಮದಲ್ಲಿ ಮಹಿಳೆಯರು ಸಹಭಾಗಿಗಳಷ್ಟೇ ಅಲ್ಲದೆ ಅವರ ನೇತೃತ್ವವು ಅಷ್ಟೇ ಪ್ರಾಮುಖ್ಯವಾಗಿದೆ. ಸ್ವಾತಂತ್ರ್ಯ ಚಳುವಳಿಯ ಸಂಗ್ರಾಮ ಪುಸ್ತಕದಲ್ಲಿ ನಮ್ಮ ಮುಂಬೈ ಕರ್ನಾಟಕದ ಮಹಿಳೆಯರ ಪಾತ್ರವೂ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟ ಅಧ್ಯಾಯವಾಗಿದೆ. “ಸ್ವಾತಂತ್ರ್ಯವೆಂಬ ಪದ ನಮ್ಮ ಕಿವಿಗೆ ಬಿದ್ದಾಗಲೇ ಹೃದಯ ಉಲ್ಲಾಸಗೊಳ್ಳುತ್ತದೆ, ಆದರೆ ಆ ಸ್ವಾತಂತ್ರ್ಯಕ್ಕಾಗಿ ಎಷ್ಟು ತ್ಯಾಗ, ಎಷ್ಟು ಬಲಿದಾನ ನಡೆದಿತ್ತೋ ಎಂಬುದನ್ನು ಅರಿತುಕೊಳ್ಳುವುದು

ನಮ್ಮ ನಿಜವಾದ ಕರ್ತವ್ಯ."

ಇತಿಹಾಸದ ಪುಟಗಳು ಹೇಳುತ್ತವೆ ಭಾರತದ ಸ್ವಾತಂತ್ರ್ಯ ಚಳುವಳಿ ಕೇವಲ ಪುರುಷರ ಹೋರಾಟವಲ್ಲ, ಅದು ಮಹಿಳೆಯರ ತ್ಯಾಗದ ಪಥವೂ ಹೌದು. ಈ ಹಿನ್ನೆಲೆಯಲ್ಲಿ, ಮುಂಬೈ ಕರ್ನಾಟಕದ ಧೀರ ಮಹಿಳೆಯರು ತಮ್ಮ ಅಜೇಯ ಧೈರ್ಯ, ಅಸಾಧಾರಣ ಶೌರ್ಯ ಮತ್ತು ನಿಷ್ಕಾಮ ದೇಶಭಕ್ತಿಯಿಂದ ಸ್ವಾತಂತ್ರ್ಯ ಚಳುವಳಿಗೆ ಅನನ್ಯ ಕೊಡುಗೆ ನೀಡಿದರು. ಕಿತ್ತೂರದ ರಾಣಿ ಚೆನ್ನಮ್ಮಳ ಕತ್ತಿಯ ಚುರುಕಿನಲ್ಲಿ ಬ್ರಿಟಿಷರ ದರ್ಪ ಕುಸಿದರೆ, ಧಾರವಾಡದ ಉಮಾಬಾಯಿ ಕುಂದಾಪುರರ ಸೇವಾ ಮನೋಭಾವದಲ್ಲಿ ಅಹಿಂಸೆಯ ನಾದ ಮೊಳಗಿತು. ಧೈರ್ಯಶಾಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋಧರಾ ದಾಸಪ್ಪ, ಬೀದರ್‌ನ ಸೈದಾಬಿ ಮುಂತಾದ ಮಹಿಳೆಯರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಶ್ರಮ, ಬುದ್ಧಿ ಮತ್ತು ನಂಬಿಕೆಯನ್ನೆಲ್ಲ ಅರ್ಪಿಸಿದರು.

ಮುಂಬೈ ಕರ್ನಾಟಕದ ಈ ಮಹಿಳೆಯರು ಕೇವಲ ಹೋರಾಟಗಾರ್ತಿಯರಷ್ಟೇ ಅಲ್ಲ, ಸಂಘಟನಾಶೀಲರು, ಚಿಂತಕರು ಮತ್ತು ಸಮಾಜ ಪರಿವರ್ತಕರೂ ಆಗಿದ್ದರು. ಇದೇ ಮಹಿಳಾ ಶಕ್ತಿಯ ಚೈತನ್ಯವು 1924ರ ಬೆಳಗಾವಿ ಅಧಿವೇಶನದಲ್ಲಿ ಮತ್ತೊಮ್ಮೆ ಬೆಳಗಿತು. ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಆ ಅಧಿವೇಶನದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿತ್ತು. ಮಹಿಳೆಯರು ಅಹಿಂಸಾತ್ಮಕ ಮಾರ್ಗದಲ್ಲಿ, ಖಾದಿಯ ಧಾರಣೆ, ಸ್ವದೇಶಿ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ ಹಾಗೂ ಸಮಾಜ ಸುಧಾರಣೆಯ ಹಾದಿಯಲ್ಲಿ ರಾಷ್ಟ್ರಪಿತನ ಆಶಯಕ್ಕೆ ಜೀವ ತುಂಬಿದರು. ಈ ಚಳುವಳಿಯಲ್ಲಿ ಮುಂಬೈ ಕರ್ನಾಟಕದ ಮಹಿಳೆಯರು ಪ್ರದರ್ಶಿಸಿದ ನಿಷ್ಠೆ ಮತ್ತು ತ್ಯಾಗ ಇಂದು ನಮ್ಮ ಇತಿಹಾಸದ ಅಕ್ಷರಗಂಗೆಯಲ್ಲಿ ಅಮರವಾಗಿದೆ. ಇಂದು ಈ ಪ್ರಬಂಧದ ಮೂಲಕ ನಾನು ಆ ಧೀರ ಮಹಿಳೆಯರ ಜೀವನಯಾನ, ಅವರ ಕೊಡುಗೆ ಮತ್ತು ಅವರಿಂದ ಮೂಡಿದ ರಾಷ್ಟ್ರೀಯ ಚೇತನದ ಸ್ಫೂರ್ತಿ ಅಪೂರ್ವವಾದುದು.

**ಉದ್ದೇಶ:**

ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಬೈ ಕರ್ನಾಟಕದ ಮಹಿಳೆಯರು ನಿರ್ವಹಿಸಿದ ಪಾತ್ರ ಸ್ಫೂರ್ತಿಯ ಸೆಲೆಯಾಗಿದೆ. ಇತಿಹಾಸವನ್ನೇ ಸೃಷ್ಟಿಸಿದ ಇಂತಹ ಕೆಲವು ಮಹಿಳೆಯರ ಜೀವನ ಚರಿತ್ರೆಯನ್ನು ತಿಳಿದು, ಸಂಗ್ರಾಮ ಸಮಯದಲ್ಲಿ ಅವರು ಅನುಭವಿಸಿದ ಯಾತನೆಗಳನ್ನರಿತು, ಅವರ ದೇಶಭಕ್ತಿ, ತ್ಯಾಗ, ಧೈರ್ಯ ಹಾಗೂ ನಿಸ್ವಾರ್ಥ ಸೇವಾ ಭಾವವನ್ನು ಇಂದಿನ ಪೀಳಿಗೆ ಕಲಿಯಬೇಕಾದ ಮೌಲ್ಯಗಳಾಗಿವೆ. ಆದುದರಿಂದ ಈ ಲೇಖನವೂ ಇಂದಿನ ಪೀಳಿಗೆಗೆ ಸ್ವಾರ್ಥಕ್ಕಿಂತಲೂ ರಾಷ್ಟ್ರದ ಹಿತ ಮುಖ್ಯ ಎಂಬ ಪಾಠವನ್ನು ಕಲಿಸುವ ನಿಟ್ಟಿನಲ್ಲಿ ಸಾಗಿದೆ.

**ಮುಂಬೈ ಕರ್ನಾಟಕದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು:**

**ಕಿತ್ತೂರು ರಾಣಿ ಚೆನ್ನಮ್ಮ:**

ಬ್ರಿಟಿಷರ ಕಾಲದಲ್ಲಿ ತಮ್ಮ ರಾಜ್ಯಕ್ಕಾಗಿ ಅನೇಕ ವೀರ ಯೋಧರು ಹಾಗೂ ಅರಸರು ತಮ್ಮ ಪ್ರಾಣವನ್ನು ತೆತ್ತಿದ್ದಾರೆ. ಇವರ ನಡುವೆ ರಾಜ್ಯದ ರಕ್ಷಣೆಗಾಗಿ ಇಂಗ್ಲೀಷರ ವಿರುದ್ಧ ಹೋರಾಡಿದ ಪ್ರಥಮ ಮಹಿಳೆ ಎಂದರೆ ಕಿತ್ತೂರು ರಾಣಿ ಚೆನ್ನಮ್ಮ. ದತ್ತು ಪುತ್ರರಿಗೆ ರಾಜ್ಯವಿಲ್ಲವೆಂಬ ಇಂಗ್ಲೀಷರ ದಬ್ಬಾಳಿಕೆಯ ವಿರುದ್ಧ ಹೋರಾಡಿದ ವೀರ ಮಹಿಳೆ ಚೆನ್ನಮ್ಮ.

ಕಿತ್ತೂರು ಚೆನ್ನಮ್ಮ ಹುಟ್ಟಿದ್ದು 23 ಅಕ್ಟೋಬರ್ 1778 ರಲ್ಲಿ. ಬೆಳಗಾವಿಯಿಂದ ಉತ್ತರಕ್ಕೆ ಸುಮಾರು ಆರು ಕಿಲೋಮೀಟರ್ ದೂರದಲ್ಲಿರುವ ಕಾಕತಿ ಅವಳ ಹುಟ್ಟೂರು. ತಂದೆ ಕಾಕತಿಯ ದೇಸಾಯಿ ಧೂಳಪ್ಪ ಗೌಡರು. ಚೆನ್ನಮ್ಮ ಎಳೆವಯಸ್ಸಿನಲ್ಲಿಯೇ ಕುದುರೆ ಸವಾರಿ ಹಾಗೂ ಬಿಲ್ಲು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದಳು. ಕಿತ್ತೂರಿನ ಮಲ್ಲ ಸರ್ಜ ದೇಸಾಯಿಯೊಡನೆ ಚೆನ್ನಮ್ಮಳ ವಿವಾಹವಾಗುತ್ತದೆ. ಶಕ 1772 ರಿಂದ 1816ರವರೆಗೆ ರಾಜ್ಯವನ್ನಾಳಿದ ಮಲ್ಲ ಸರ್ಜ ದೇಸಾಯಿ ಕಿತ್ತೂರಿನ ಅರಸರಲ್ಲಿ ಪ್ರಮುಖನಾದವನು. ಮಲ್ಲಸರ್ಜ ದೇಸಾಯಿಗೆ ರುದ್ರವ್ವ ಹಾಗೂ ಚೆನ್ನಮ್ಮ ಇಬ್ಬರು ಹೆಂಡಂದಿರು. ಚೆನ್ನಮ್ಮಳಿಗೆ ಮಕ್ಕಳಿರಲಿಲ್ಲ. ಮಲ್ಲಸರ್ಜನ ಮರಣಾ ನಂತರ ರುದ್ರವ್ವನ ಹಿರಿಯ ಮಗ ಶಿವಲಿಂಗ ರುದ್ರಸರ್ಜ ಪಟ್ಟಕ್ಕೆ ಬಂದ. ಮಕ್ಕಳಿಲ್ಲದ ರುದ್ರಸರ್ಜಾ ಅನಾರೋಗ್ಯದಿಂದ 1824ರಲ್ಲಿ ಮರಣಿಸಿದ. ಇದಕ್ಕೆ ಮೊದಲು ಮಾಸ್ತ್ ಮರಡಿ ಬಾಳಪ್ಪ ಗೌಡ್ರ ಮಗ ಶಿವಲಿಂಗ ಎಂಬ ಬಾಲಕನನ್ನು ದತ್ತು ತೆಗೆದುಕೊಂಡಿದ್ದ. ಈ ದತ್ತು ಪುತ್ರನನ್ನು ಧಾರವಾಡದ ಕಲೆಕ್ಟರ್ ಥ್ಯಾಕರೇ ತಿರಸ್ಕರಿಸುತ್ತಾನೆ.

13 ಸೆಪ್ಟೆಂಬರ್ 1824 ರಂದು ಥ್ಯಾಕರೇ ಸ್ವತಃ ಕಿತ್ತೂರಿಗೆ ಬಂದು ಕಂಪನಿ ಸರ್ಕಾರದಿಂದ ಮುಂದಿನ ಆದೇಶ ಬರುವವರೆಗೂ ತಾತ್ಕಾಲಿಕವಾಗಿ ಮಲ್ಲಪ್ಪ ಶೆಟ್ಟಿ ಹಾಗೂ ಹಾವೇರಿ ವೆಂಕಟರಾವ್ ಇವರನ್ನು ಸಂಸ್ಥಾನದ ವ್ಯವಹಾರ ನಿರ್ವಹಿಸಲು ನೇಮಕ ಮಾಡುತ್ತಾನೆ ಹಾಗೂ ಕಿತ್ತೂರಿನ ಭಂಡಾರಕ್ಕೆ ಬೀಗಮುದ್ರೆಯನ್ನು ಹಾಕುತ್ತಾನೆ. ಆದರೆ ಇದನ್ನು ಕೆಚ್ಚೆದೆಯಿಂದ ಎದುರಿಸಿದವಳು ಮೃತ ಶಿವಲಿಂಗ ರುದ್ರಸರ್ಜನ ಮಲತಾಯಿ ಚೆನ್ನಮ್ಮ. ಆಗ ಬ್ರಿಟಿಷರು ಕಿತ್ತೂರು ಸಂಸ್ಥಾನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಸನ್ನಾಹವನ್ನು ನಡೆಸಿದ್ದರು. ಇದರಿಂದ ಕುಪಿತಗೊಂಡ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧತೆಯನ್ನು ನಡೆಸಿದಳು. ಅರಮನೆಯ ಕಾರುಬಾರಿಗಳಾಗಿದ್ದ ಮಲ್ಲಪ್ಪ ಶೆಟ್ಟಿ, ವೆಂಕಟರಾಯ ಎಂಬ ದೇಶದ್ರೋಹಿಗಳಿಂದ ಈ ಸುದ್ದಿ ಧಾರವಾಡದ ಕಲೆಕ್ಟರ್ ಥ್ಯಾಕ್ರೆಗೆ ತಿಳಿಯಿತು. 1824 ಅಕ್ಟೋಬರ್ 21ರಂದು ಥ್ಯಾಕರೇ ಹಠಾತ್ತಾಗಿ ಕಿತ್ತೂರಿನ ಕೋಟೆಯ ಮೇಲೆ ಎರಗಿದ. ಅಕ್ಟೋಬರ್ 23ರಂದು ಕೋಟೆಯ ಹೆಬ್ಬಾಗಿಲನ್ನು ಹೊಡೆಯಲು ಥ್ಯಾಕರೇ ಕ್ಯಾಪ್ಟನ್, ಬ್ಲಾಕ್ ಗೆ ಆಜ್ಞೆಯನ್ನು ಮಾಡಿದ. ಅಷ್ಟರಲ್ಲಿ ಕಿತ್ತೂರಿನ ಯೋಧ ಮಟ್ಟೂರು ಬಾಳಪ್ಪ ಥ್ಯಾಕರೇಯನ್ನು ಗುಂಡಿಕ್ಕಿ ಕೊಂದ. ಬ್ಲಾಕ್, ಮತ್ತಿತರ ಅಧಿಕಾರಿಗಳು ಹೋರಾಟದಲ್ಲಿ ಸತ್ತರು. ನೂರಾರು ಬ್ರಿಟಿಷ್ ಸೈನಿಕರು ಸೆರೆಸಿಕ್ಕರು. ಚೆನ್ನಮ್ಮ ಈ ಸೆರೆಯಾಳುಗಳ ಬಗೆಗೆ ಉದಾರವಾಗಿ ನಡೆದುಕೊಂಡಳು.

ಬ್ರಿಟಿಷರ ವಿರುದ್ಧ ಕಿತ್ತೂರಿನ ಪ್ರಥಮ ಗೆಲುವನ್ನು ಇಂದಿಗೂ ಸಹ ಕಿತ್ತೂರಿನ ಉತ್ಸವದ ಜೊತೆ ಆಚರಿಸಲಾಗುತ್ತದೆ. ಮೈಸೂರು, ಮದ್ರಾಸು, ಮುಂಬೈ, ಸೋಲ್ಲಾಪುರ ಇನ್ನಿತರ ಕಡೆಗಳಿಂದ ಬಂದ ಬ್ರಿಟಿಷ್ ಸೈನ್ಯ ಕಿತ್ತೂರಿನ ಮೇಲೆ ದಾಳಿ ಮಾಡಿತು. ದತ್ತು ಪುತ್ರನನ್ನು ಮಾನ್ಯ ಮಾಡುವುದಾಗಿ ಚಾಪ್ಲಿನ್ ವಚನ ಕೊಟ್ಟಾಗ, ಚೆನ್ನಮ್ಮ ಖೈದಿಗಳನ್ನು ಬಿಡುಗಡೆ ಮಾಡಿದಳು. ಆದರೆ ಮಾತಿಗೆ ತಪ್ಪಿದ ಚಾಪ್ಲಿನ್ ಯುದ್ಧಕ್ಕೆ ಆಜ್ಞೆ ಮಾಡಿದ. ಇದರಿಂದ ಕ್ರೋಧಿತಳಾದ ಚೆನ್ನಮ್ಮ, ಸ್ವತಃ ತನ್ನ ವೀರರೊಡನೆ ಕಾಳಗಕ್ಕೆ ಮುಂದಾದಳು. ಬ್ರಿಟಿಷರ ಸುಸಜ್ಜಿತ ಆಯುಧಗಳೆದುರು ಕಿತ್ತೂರು ಪಕ್ಷಕ್ಕೆ ಸೋಲುಂಟಾಯಿತು. ಚೆನ್ನಮ್ಮ ಮತ್ತು ಸೊಸೆ ವೀರವ್ವನನ್ನು ಬಂಧಿಸಿ, ಬೈಲುಹೊಂಗಲದಲ್ಲಿ ಸೆರೆ ಇರಿಸಲಾಯಿತು.

ಚೆನ್ನಮ್ಮ ಮತ್ತೆ ರಾಜ್ಯ ಪಡೆಯುವ ಆಸೆ ಹೊತ್ತು, ಸಂಗೊಳ್ಳಿ ರಾಯಣ್ಣನಂತಹ ವೀರಯೋಧರ ಗುಪ್ತ ಸಂಪರ್ಕ ಪಡೆದಳು. ಕಿತ್ತೂರಿನ ಬಿಡುಗಡೆಗಾಗಿ ಪ್ರಯತ್ನ ನಡೆಸಲು,

ತನ್ನ ಒಡವೆಗಳನ್ನು, ಹಣವನ್ನು ಕಳಿಸುತ್ತಾ, ಅವರನ್ನು ಹುರಿದುಂಬಿಸಿದಳು. ಕೊನೆಗೆ ರಾಣಿ ಚೆನ್ನಮ್ಮ ತನ್ನ 57ನೇ ವಯಸ್ಸಿನಲ್ಲಿ 1829 ಫೆಬ್ರವರಿ 2ರಂದು ಕೊನೆಯುಸಿರೆಳೆದಳು. ಕಿತ್ತೂರು ರಾಣಿ ಚೆನ್ನಮ್ಮ ಹುಟ್ಟಿದ ದಿನ, ಬ್ರಿಟಿಷರಿಗೆ ಸೋಲುಣಿಸಿದ ಅಕ್ಟೋಬರ್ 23 ದಿನದಂದು ರಾಜ್ಯ ಸರ್ಕಾರ ಪ್ರತಿ ವರ್ಷ ಕಿತ್ತೂರಿನ ಉತ್ಸವವಾಗಿ ಆಚರಣೆ ಮಾಡಲಾಗುತ್ತಿದೆ. ಕಿತ್ತೂರಿನ ರಾಣಿ ಚೆನ್ನಮ್ಮ ಇಂದಿಗೂ ಎಂದೆಂದಿಗೂ ಅಜರಾಮರ.

**ರಾಣಿ ಅಬ್ಬಕ್ಕ ದೇವಿ:**

ಇವರು ಮಂಗಳೂರಿನ ಮುಳ್ಳಾಲದವರಾದರೂ ಪೋರ್ಚುಗೀಸರೊಡನೆ ದಿಟ್ಟತನದಿಂದ ಹೋರಾಡಿದ ರೀತಿ, ಮುಂಬೈ ಕರ್ನಾಟಕದ ಮಹಿಳೆಯರಲ್ಲಿ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಮಹತ್ವದ ಹೆಜ್ಜೆಯ ದಾಪುಗಾಲು ಇಡಲು ಪಾಠವಾಗಿದೆ. ಹಾಗಾಗಿ ರಾಣಿ ಅಬ್ಬಕ್ಕ ದೇವಿಯ ಜೀವನ ಚರಿತ್ರೆಯು ಈ ಪ್ರಬಂಧದಲ್ಲಿ ಪ್ರಸ್ತುತವೆನಿಸುತ್ತಿದೆ.

ಕಿತ್ತೂರು ರಾಣಿ ಚೆನ್ನಮ್ಮ, ಕೆಳದಿ ರಾಣಿ ಚೆನ್ನಮ್ಮ, ಇವರ ಸಾಲಿನಲ್ಲಿ ನಿಲ್ಲುವ ಮತ್ತೊಬ್ಬ ವೀರ ಮಹಿಳೆ ಎಂದರೆ ಉಳ್ಳಾಲದ ರಾಣಿ ಅಬ್ಬಕ್ಕದೇವಿ. ಚೌಟ ಮನೆತನಕ್ಕೆ ಸೇರಿದ ಇವರು ತನ್ನ ಚಿಕ್ಕಪ್ಪನಾದ ತಿರುಮಲ ರಾಯರಿಂದ ಯುದ್ಧ ತಂತ್ರ ಕಲೆಗಳು, ಶಸ್ತ್ರಾಭ್ಯಾಸದಲ್ಲಿ ಪ್ರಾವೀಣ್ಯತೆಯನ್ನು ಪಡೆದು ಉಳ್ಳಾಲದ ರಾಣಿಯಾಗಿ ಅಧಿಕಾರಕ್ಕೆ ಬಂದರು. ಮಂಗಳೂರಿನ ಭಂಗ ಪ್ರಾಂತ್ಯದ ಲಕ್ಷ್ಮಪ್ಪ ಅರಸರೊಡನೆ ಇವರ ವಿವಾಹವಾಯಿತು. ಆದರೆ ವೈವಾಹಿಕ ಜೀವನದ ವೈಫಲ್ಯ ಪುನಃ ಉಳ್ಳಾಲಕ್ಕೆ ಹಿಂತಿರುಗಿಸಿತು. 16ನೇ ಶತಮಾನದಲ್ಲಿ ಪೋರ್ಚುಗೀಸರಿಗೆ ಕಪ್ಪ ಕೊಡಲೊಪ್ಪದೇ, ಶಕ 1555ರಲ್ಲಿ ಪೋರ್ಚುಗೀಸರು ಉಳ್ಳಾಲದ ಮೇಲೆ ಯುದ್ಧ ಸಾರಿದಾಗ ಯುದ್ಧವನ್ನು ಜಯಿಸಿದ ಸಾಧಕಿ ಇವರು. ನಂತರ ಕ್ರಿ.ಶ. 1568ರಲ್ಲಿ ಪೋರ್ಚುಗೀಸರ ವೈಸರಾಯ್ ಆದ ಅಂಟೋನಿಯೋ ಮೊರಹರವರ ನೇತೃತ್ವದ ಸೈನ್ಯ ಉಳ್ಳಾಲವನ್ನು ಪ್ರವೇಶಿಸಿತು. ಕೇವಲ 200 ಮಂದಿ ಸೈನಿಕರೊಂದಿಗೆ ಎರಗಿದ ರಾಣಿಯು ಜನರಲ್ ಪೆಕ್ಸಿಟೋ ಹತ್ಯೆಗೆ ಕಾರಣಳಾದಳು. ಪೋರ್ಚುಗೀಸ್ ಸೈನಿಕರನ್ನು ಸೆರೆ ಹಿಡಿಯಲಾಯಿತು. ಮುಂದುವರಿದ ಮತ್ತೊಂದು ಕದನದಲ್ಲಿ ಪೋರ್ಚುಗೀಸರ ಅಡ್ಮಿರಲ್ ಮಾಸ್ ಕಾರೆನ್ಸ್ ನು ಸೈನಿಕರಿಂದ ಹತನಾದನು. ರಾಣಿ ಅಬ್ಬಕ್ಕ ದೇವಿಯು ಪೋರ್ಚುಗೀಸರಿಗೆ ಮಂಗಳೂರು ಕೋಟೆಯನ್ನು ಬಿಟ್ಟು ಹೊರಡಬೇಕೆಂದು ಒತ್ತಾಯಿಸಿದಳು. ಆದರೆ ಉಳ್ಳಾಲದ ಸಂಪತ್ತಿನಿಂದ ಆಕರ್ಷಿತರಾದ ಪೋರ್ಚುಗೀಸರು ಪದೇ ಪದೇ ಯುದ್ಧ ಸಾರುತ್ತಲೇ ಇದ್ದರು. ಶಕ 1570ರಲ್ಲಿ ಬಿಜಾಪುರದ ಸುಲ್ತಾನ ಹಾಗೂ ಕಲ್ಲಿಕೋಟೆಯ ಜಾಮೋರಿನ್ ರವರೊಂದಿಗೆ ಮೈತ್ರಿ ಒಪ್ಪಂದವನ್ನು ರಾಣಿಯು ಮಾಡಿಕೊಂಡಳು. ಜಾಮೋರಿನ್ ದೊರೆಯ ದಂಡನಾಯಕನಾದ ಕುಲ್ಪಿಪೂಕರ್ ಮಾರ್ಕಕರ್ ಅಬ್ಬಕ್ಕ ದೇವಿಯ ಪರವಾಗಿ ಹೋರಾಡಿ ಮಂಗಳೂರು ಕೋಟೆಯನ್ನು ಗೆದ್ದು ರಾಣಿಗೆ ಒಪ್ಪಿಸಿ, ಹಿಂತಿರುಗುವಾಗ ಪೋರ್ಚುಗೀಸ್ ಸೈನ್ಯದಿಂದ ಹತನಾದನು.

ಅಬ್ಬಕ್ಕ ದೇವಿಯ ಪತಿಯಾದ ಲಕ್ಷ್ಮರಸನ ನೆರವಿನಿಂದ ಪೋರ್ಚುಗೀಸರು ಅಬ್ಬಕ್ಕದೇವಿಯನ್ನು ಯುದ್ಧದಲ್ಲಿ ಸೋಲಿಸಿ ಸೆರೆಮನೆಗೆ ನೂಕಿದರು. ಸ್ವಾತಂತ್ರ್ಯದ ಕನಸು ಕಾಣುತ್ತಾ ಅಬ್ಬಕ್ಕ ದೇವಿಯು ಸೆರೆಮನೆಯಲ್ಲಿಯೇ ತೀರಿಕೊಂಡಳು. ರಾಣಿ ಅಬ್ಬಕ್ಕ ದೇವಿಯ ಸ್ಮರಣಾರ್ಥವಾಗಿ ಮಂಗಳೂರು ಬಳಿಯ ಉಳ್ಳಾಲದಲ್ಲಿ ವೀರರಾಣಿ ಅಬ್ಬಕ್ಕ ಉತ್ಸವವನ್ನು ಆಚರಿಸುತ್ತಾರೆ. ಸಾಧನೆಗೈದ ಮಹಿಳಾ ಸಾಧಕಿಯರಿಗೆ ವೀರರಾಣಿ ಅಬ್ಬಕ್ಕ ಪ್ರಶಸ್ತಿಯನ್ನು ನೀಡುತ್ತಾರೆ. ಜನವರಿ 15, 2013ರಲ್ಲಿ ರಾಣಿ ಅಬ್ಬಕ್ಕ ದೇವಿಯ ಭಾವಚಿತ್ರವಿರುವ ಅಂಚೆ

ಚೀಟಿಯನ್ನು ಭಾರತ ಅಂಚೆ ಇಲಾಖೆಯು ಹೊರ ತಂದು, ಆಕೆಯ ಶೌರ್ಯಕ್ಕೆ ಗೌರವ ಸೂಚಿಸಿದೆ.

**ಬಳ್ಳಾರಿ ಸಿದ್ದಮ್ಮ (ಶಕ 1903–1981):**

ಹಾವೇರಿ ಜಿಲ್ಲೆಯ ದುಂಡಸಿ ಗ್ರಾಮದ ಸಂಪ್ರದಾಯಸ್ಥ ಕುಟುಂಬದಲ್ಲಿ 1903ರಲ್ಲಿ ಕೊಟ್ಟೆಗೆ ಬಸಟಪ್ಪ ರವರ ಮಗಳಾಗಿ ಜನಿಸಿದರು. ತಂದೆ ವೃತ್ತಿಯಲ್ಲಿ ವ್ಯಾಪಾರಸ್ಥರಾದರೂ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಉತ್ಸಾಹ ಹೊಂದಿದ್ದರು. ಅಂದಿನ ದಿನಪತ್ರಿಕೆಗಳನ್ನು ಹಾಗೂ ನಿಯತಕಾಲಿಕೆಗಳನ್ನು ಮಗಳಿಗೆ ತರಿಸಿ ಕೊಡುತ್ತಿದ್ದುದ್ದರಿಂದ ರಾಷ್ಟ್ರೀಯ ವಿಚಾರಧಾರೆಗಳನ್ನು ಸಿದ್ದಮ್ಮ ಓದಿ ತಿಳಿದುಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ಹೋರಾಟಗಾರರಾದ ಬಳ್ಳಾರಿ ಮುರುಗಪ್ಪ ರವರನ್ನು ವಿವಾಹವಾಗಿದ್ದು ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಲು ಕಾರಣವಾಯಿತು. ಶಕ 1930ರಲ್ಲಿ ಹಳೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ತೀವ್ರ ಗತಿಯಲ್ಲಿ ನಡೆಯುತ್ತಿತ್ತು. ಆಗ ಎಸ್ ನಿಜಲಿಂಗಪ್ಪ, ಟಿ ಸಿದ್ದಲಿಂಗಯ್ಯ, ಸರ್ದಾರ್ ವೀರಣ್ಣಗೌಡ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು 1938 ರಲ್ಲಿ ನಡೆಸಿದ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸಿದ್ದಮ್ಮ ರವರು ಭಾಗವಹಿಸಿದ್ದರು.

ಏಪ್ರಿಲ್ 13, 1938ರಂದು ಧ್ವಜಾರೋಹಣ ಮಾಡಿ ದಸ್ತಗಿರಿಯಾದರು. ತಿಂಗಳ ಕಾಲ ಕಾರಾಗೃಹ ಶಿಕ್ಷೆಯನ್ನೂ ಅನುಭವಿಸಿದರು. ಮೈಸೂರು ಸಂಸ್ಥಾನದಲ್ಲಿ ಧ್ವಜಾರೋಹಣಗೈದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ಇವರದಾಯಿತು. ಪತ್ರಿಕೆಗಳು ಇವರ ಬದ್ಧತೆಯನ್ನು ಮೆಚ್ಚಿ ಪ್ರಶಂಸಿಸಿದವು. ಕಾರಾಗೃಹ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆಯಾದ ನಂತರ ತಮ್ಮನ್ನು ಸಂಪೂರ್ಣವಾಗಿ ಸ್ವಾತಂತ್ರ ಹೋರಾಟದಲ್ಲಿ ತೊಡಗಿಸಿಕೊಂಡರು. ಶಕ 1939ರಲ್ಲಿ ಚಿತ್ರದುರ್ಗದ ಅರಣ್ಯ ಸತ್ಯಾಗ್ರಹದಲ್ಲಿಯೂ ಪಾಲ್ಗೊಂಡರು.

ದಾವಣಗೆರೆ ತಾಲೂಕಿನ ಆನ್ಗೋಡು ಹಾಗೂ ಮಾಯಕೊಂಡ ಅರಣ್ಯ ಪ್ರದೇಶಗಳಲ್ಲಿ ಈಚಲು ಮರಗಳನ್ನು ಕಡಿಯುವ ಚಳುವಳಿಯಲ್ಲಿ ಭಾಗವಹಿಸಿ, ಜೈಲು ಶಿಕ್ಷೆಯನ್ನನುಭವಿಸಿದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಇವರ ಪಾತ್ರ ಅಗಾಧವಾದದ್ದು. ಭಾರತ ಸ್ವಾತಂತ್ರ್ಯ ಗಳಿಸಿದರೂ, ಮೈಸೂರು ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸುವ ತೀರ್ಮಾನ ಪ್ರಕಟಿಸದಿದ್ದುದ್ದರಿಂದ, ಶಕ 1942ರಲ್ಲಿ ಮೈಸೂರು ಚಲೋ ಸತ್ಯಾಗ್ರಹದಲ್ಲಿಯೂ ಬಳ್ಳಾರಿ ಸಿದ್ದಮ್ಮ ಭಾಗವಹಿಸಿದ್ದರು. ಇದರ ನಂತರ ಮೈಸೂರು ರಾಜ್ಯ ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾಯಿತು. ಹೀಗೆ ಅಕ್ಟೋಬರ್ 1947ರಲ್ಲಿ ಕೆ ಸಿ ರೆಡ್ಡಿ ಅವರ ನೇತೃತ್ವದಲ್ಲಿ ಹೊಸ ಸರ್ಕಾರವು ಅಸ್ತಿತ್ವಕ್ಕೆ ಬಂದಿತು. ಸ್ವಾತಂತ್ರ್ಯದ ನಂತರ ದಾವಣಗೆರೆ ತಾಲೂಕಿನ ಶಾಸಕರಾಗಿ ಸಿದ್ದಮ್ಮ ರವರು ಸೇವೆ ಸಲ್ಲಿಸಿದರು. ಗ್ರಾಮೀಣ ಬಡ ಮಹಿಳೆಯರ ಆರೋಗ್ಯದ ರಕ್ಷಣೆಗಾಗಿ ಮಾತೃ ಮಂದಿರವನ್ನು ಸ್ಥಾಪಿಸಿದರು. ಈ ಸೇವಾ ಕಾರ್ಯವನ್ನು ಮೆಚ್ಚಿ ರಾಜ್ಯ ಸರ್ಕಾರ ತಾಮ್ರ ಪತ್ರವನ್ನು ನೀಡಿ ಗೌರವಿಸಿತು. ಹೀಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಹಿಳೆಯರ ಗೌರವವನ್ನು ಹೆಚ್ಚಿಸಿದ ಬಳ್ಳಾರಿ ಸಿದ್ದಮ್ಮ ರವರ ಪಾತ್ರ ಅಮೋಘವಾದುದು.

**ಕಮಲಾದೇವಿ ಚಟ್ಟೋಪಾಧ್ಯಾಯ (1903–1988):**

ಇವರು ಏಪ್ರಿಲ್ 3, 1903 ರಂದು ಮಂಗಳೂರಿನ ಪ್ರತಿಷ್ಠಿತ ಕುಟುಂಬದವರಾದ ಧಾರೇಶ್ವರ ಅನಂತರಾಯರು ಹಾಗೂ ಗಿರಿಜಾಬಾಯಿ ಅವರ ಮಗಳಾಗಿ ಜನಿಸಿದರು. ತಂದೆ ಉನ್ನತ ಅಧಿಕಾರಿಯಾಗಿದ್ದರು. ಕ್ಯಾಥೋಲಿಕ್ ಕಾನ್ವೆಂಟ್ ಆಗು ಸೆಂಟ್ ಮೇರಿಸ್ ಶಾಲೆಯಲ್ಲಿ

ಶಿಕ್ಷಣ ಪಡೆದರು. 14ನೇ ವಯಸ್ಸಿನಲ್ಲಿ ವಿವಾಹವಾಗಿ ಅಲ್ಪಕಾಲದಲ್ಲೇ ವಿಧವೆಯಾದರು. ತಂದೆ ಮದ್ರಾಸಿಗೆ ವರ್ಗವಾದಾಗ ಮದ್ರಾಸಿನಲ್ಲಿ ಶಿಕ್ಷಣವನ್ನು ಮುಂದುವರಿಸಿದ್ದರು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ನಲ್ಲಿ ಪದವಿ ಪಡೆದು ಭಾರತಕ್ಕೆ ಹಿಂದಿರುಗಿ, ಸಮಾಜ ಸುಧಾರಣೆಯಲ್ಲಿ ತಮ್ಮನ್ನು ಅರ್ಪಿಸಿಕೊಂಡರು. ಹರೇಂದ್ರನಾಥ್ ಚಟ್ಟೋಪಾಧ್ಯಾಯರೊಡನೆ ಮರುವಿವಾಹವಾಗಿ ಕಮಲಾದೇವಿ ಚಟ್ಟೋಪಾಧ್ಯಾಯರಾದರು. ಮಹಾತ್ಮ ಗಾಂಧೀಜಿಯವರ ಪ್ರಭಾವದಿಂದಾಗಿ ಕಮಲಾದೇವಿಯವರು ಅಸಹಕಾರ ಚಳುವಳಿಯಲ್ಲಿ ಪಾಲ್ಗೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಯುವ ಜನತೆಯನ್ನು ಪ್ರೇರೇಪಿಸಿದರು. ಅಲಹಾಬಾದ್ ನಗರದಲ್ಲಿ 1929ರಲ್ಲಿ ರಾಷ್ಟ್ರಧ್ವಜ ಹಿಡಿದು ಘೋಷಣೆ ಕೂಗುತ್ತಾ ಮೆರವಣಿಗೆ ಹೊರಟು, ಬ್ರಿಟಿಷ್ ದೌರ್ಜನ್ಯವನ್ನು ಖಂಡಿಸಿದರು.

ದಂಡಿ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿ ಮಹಿಳೆಯರು ಸತ್ಯಾಗ್ರಹದಲ್ಲಿ ಭಾಗವಹಿಸಲು ಅನುಮತಿಯನ್ನು ಕೋರಿದರು. ಹೀಗೆ ಕಮಲಾದೇವಿ ಹಾಗೂ ಅವಂತಿ ಬಾಯಿ ಗೋಖಲೆ ಯವರು ಉಪ್ಪಿನ ಕಾನೂನು ಭಂಗ ಚಳುವಳಿಯಲ್ಲಿ ಪ್ರಥಮ ಮಹಿಳೆಯರಾಗಿ ಭಾಗವಹಿಸಿದರು. ಉಪ್ಪನ್ನು ಮಾರಾಟ ಮಾಡಿ ದಸ್ತಗಿರಿಯಾಗಿ ಯರವಾಡ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆ ಹೊಂದಿದ ನಂತರ, ಬಾಂಬೆಯ ಗಬಕಾಪುರದಲ್ಲಿ ಸ್ವದೇಶಿ ವಸ್ತುಗಳನ್ನು ಮಾರಾಟ ಮಾಡಿದರು. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ಸಿನ ಸೇವಾದಳದ ಮಹಿಳಾ ತಂಡದ ಜವಾಬ್ದಾರಿಯನ್ನು ವಹಿಸಿಕೊಂಡು ರಾಷ್ಟ್ರಾದ್ಯಂತ ಮಹಿಳಾ ಸ್ವಯಂಸೇವಕರ ತರಬೇತಿ ಶಿಬಿರಗಳನ್ನು ಸ್ಥಾಪಿಸಿದರು. ಈ ಚಟುವಟಿಕೆಗಳಿಂದ ಕಮಲಾದೇವಿಯವರು ಪುನಃ ದಸ್ತಗಿರಿಯಾಗಿ ಅರ್ಥರ್ ರಸ್ತೆ ಜೈಲಿನಲ್ಲಿ ಬಂಧಿಯಾದರು. ನಂತರ ವೇಲೂರು ಜೈಲಿಗೆ ವರ್ಗಾವಣೆಗೊಂಡರು.

ಶಕ 1934ರಲ್ಲಿ ಕಾಂಗ್ರೆಸ್ ಸೋಷಿಯಾಲಿಸ್ಟ್ ಪಕ್ಷವನ್ನು ಕಮಲಾದೇವಿಯವರು ಸೇರಿ ಸದಸ್ಯರಾದರು. ಸಮಾಜವಾದ ತತ್ವಗಳನ್ನು ಪ್ರಚುರಪಡಿಸಿದರು. ಇವರು ಸ್ವಾತಂತ್ರ ಹೋರಾಟಗಾರರಷ್ಟೇ ಆಗಿದ್ದರಲ್ಲದೆ ಸಮಾಜ ಸುಧಾರಕರು, ಸ್ತ್ರೀವಾದಿಗಳು, ಸಾಹಿತಿಗಳು ಹಾಗೂ ಚಲನಚಿತ್ರ ನಟರು ಆಗಿದ್ದರು. ಇವರಿಗೆ 1955ರಲ್ಲಿ ಪದ್ಮಭೂಷಣ, 1962ರಲ್ಲಿ ವತ್ಮುಲ್ ಫೌಂಡೇಷನ್ ಪ್ರಶಸ್ತಿ, 1966 ರಲ್ಲಿ ರಾಮುಸ್ ಮ್ಯಾಗ್ಸಸ್ಸೇ ಪ್ರಶಸ್ತಿ, 1987 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಗೌರವ ಲಭಿಸಿವೆ. ಇವರು 1988 ರಲ್ಲಿ ಇಹಲೋಕವನ್ನು ತ್ಯಜಿಸಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರ ಪಾತ್ರ ಮನೋಹರವಾಗಿದೆ.

**ಯಶೋಧರಮ್ಮ ದಾಸಪ್ಪ (1905–1980):**

ಯಶೋಧರಮ್ಮನವರು ಮೇ 28, 1905ರಲ್ಲಿ ರಾಮಯ್ಯ ಹಾಗೂ ರೇವಮ್ಮ ದಂಪತಿಗಳ ಪುತ್ರಿಯಾಗಿ ಬೆಂಗಳೂರಿನಲ್ಲಿ ಜನಿಸಿದರು. ರಾವ್ ಸಾಹೇಬ್ ಚೆನ್ನಯ್ಯನವರ ಮೂರನೇ ಪುತ್ರ ದಾಸಪ್ಪರೊಡನೆ 1926ರಲ್ಲಿ ಇವರ ವಿವಾಹವಾಯಿತು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ವಾರ್ಧಾ ಸೇವಾ ಗ್ರಾಮದಲ್ಲಿ ಕೆಲಕಾಲ ದಂಪತಿಗಳಿಬ್ಬರು ಸೇವೆ ಸಲ್ಲಿಸಿದರು. ನಂತರ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಮೈಸೂರು ಭಾರತ ಒಕ್ಕೂಟ ಸೇರಿದ್ದಕ್ಕೆ ಸಾಕ್ಷಿಯಾದರು. ಯಶೋದರಮ್ಮ ರವರು 1938ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಚಳವಳಿಯ ಕುರಿತು ಲೇಖನಗಳನ್ನು ಗುಟ್ಟಾಗಿ ಜ್ವಾಲೆ ಪತ್ರಿಕೆಯಲ್ಲಿ ಮುದ್ರಿಸಿ, 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತಮ್ಮ ಮನೆಯನ್ನೇ ಕೇಂದ್ರ ಸ್ಥಾನವನ್ನಾಗಿಸಿದರು.

1947ರಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿ ಯಶೋದರಮ್ಮ ಜನರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸ್ವತಂತ್ರ ಪ್ರಾಂತದಲ್ಲಿ ಶಾಸಕರಾಗಿ, ಲೋಕಸಭಾ ಸದಸ್ಯರಾಗಿ, ಎಸ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಇವರು ಸಮಾಜ ಕಲ್ಯಾಣ ಸಚಿವರಾಗಿ ಸೇವೆ ಸಲ್ಲಿಸಿದರು. 1980 ರಲ್ಲಿ ಕ್ಯಾನ್ಸರ್ ಕಾಯಿಲೆಯಿಂದ ತೀರಿಕೊಂಡರು. ಸಾಮಾಜಿಕವಾಗಿ, ರಾಜಕೀಯವಾಗಿ ಇವರು ಸಲ್ಲಿಸಿದ ಸೇವೆ ಅನುಪಮವಾದದ್ದು.

**ಉಮಾಬಾಯಿ ಕುಂದಾಪುರ (1892–1992):**

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ 1892 ರಲ್ಲಿ ಬಲಿಗೆರೆ ಕೃಷ್ಣರಾಯ ಹಾಗೂ ತುಂಗಾಭಾಯಿ ಅವರ ಮಗಳಾಗಿ ಉಮಾ ಬಾಯಿಯವರು ಜನಿಸಿದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸಂಜೀವ್ ರಾವ್ ರವರನ್ನು 13ನೇ ವಯಸ್ಸಿನಲ್ಲಿಯೇ ಮದುವೆಯಾದರು. ಪತಿಯ ಬೆಂಬಲದಿಂದ 1921ರ ನಂತರ ಖಾದಿಧಾರಿಗಳಾಗಿ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಪಾಲ್ಗೊಂಡರು. 1923ರಲ್ಲಿ ಪತಿಯನ್ನು ಕಳೆದುಕೊಂಡು ಹುಬ್ಬಳ್ಳಿಗೆ ಹಿಂತಿರುಗಿದರು. ತಿಲಕ್ ರವರ ಪ್ರಭಾವದಿಂದ ಮರಾಠಿ ಭಾಷೆಯಲ್ಲಿ ಸ್ವದೇಶಿ ವ್ರತ ಎಂಬ ನಾಟಕವನ್ನು ರಚಿಸಿ, ಸ್ವದೇಶಿ ಚಳುವಳಿಯ ತತ್ವದ ಸಾರವನ್ನು ಪ್ರಚಾರ ಮಾಡಿದರು. ಮುಂಬೈನಲ್ಲಿ ಸರಸ್ವತ ಸಾಹಿತ್ಯಕ ಸಮಾಜ ಹಾಗೂ ಭಗಿನಿ ಮಂಡಳಿ ಮತ್ತು ತಿಲಕ್ ಶಾಲೆಯ ಜವಾಬ್ದಾರಿಯನ್ನು ತೆಗೆದುಕೊಂಡರು. 1923ರಲ್ಲಿ ನಾ ಸು ಹರ್ಡೇಕರ್ ರವರು ಸ್ಥಾಪಿಸಿದ ಸೇವಾದಳದ ಮಹಿಳಾ ಸಮೂಹದ ನಾಯಕತ್ವ ವಹಿಸಿಕೊಂಡು, 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಛಾಪನ್ನು ಮೂಡಿಸಿದರು. ಇವರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ನಾಲ್ಕು ತಿಂಗಳ ಕಾಲ ಹಿಂಡಲಗಿ ಹಾಗೂ ಯರವಾಡ ಜೈಲುಗಳಲ್ಲಿ ಶಿಕ್ಷೆಯನ್ನು ಅನುಭವಿಸಿದರು. ಬಿಡುಗಡೆಗೊಂಡ ನಂತರ ಶಿರಸಿ, ಅಂಕೋಲ, ಸಿದ್ದಾಪುರ ಮುಂತಾದ ಕಡೆ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು, ಜೈಲು ಶಿಕ್ಷೆ ಅನುಭವಿಸಿದರು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡ ಕಾರ್ಯಕರ್ತರಿಗೆ ಆಶ್ರಯ ನೀಡಿ ಬೆಂಬಲಿಸಿದರು. ಗಾಂಧೀಜಿಯವರ ಸಲಹೆಯ ಮೇರೆಗೆ ಕಸ್ತೂರಿ ಬಾ ನಿಧಿಯ ಜವಾಬ್ದಾರಿ ತೆಗೆದುಕೊಂಡು, ಸಮಾಜ ಸುಧಾರಣಾ ಕಾರ್ಯವನ್ನು ನೆರವೇರಿಸಿದರು. ಹೀಗೆ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ಉಮಾಬಾಯಿಯವರು 1992 ರಲ್ಲಿ ಮರಣ ಹೊಂದಿದರು. ಇವರ ನಿಸ್ವಾರ್ಥ ಸೇವಾ ಜೀವನವು ಪ್ರಶಂಸನೀಯವಾಗಿದೆ.

**ಸರೋಜಿನಿ ಮಹಿಷಿ (1926–2015):**

ಇವರು ಧಾರವಾಡ ಜಿಲ್ಲೆಯಲ್ಲಿ 1926ರಲ್ಲಿ ರಾಷ್ಟ್ರಭಕ್ತಿಯ ಪರಂಪರೆಯುಳ್ಳ ಕುಟುಂಬದಲ್ಲಿ ಜನಿಸಿದರು. ಉತ್ತಮ ಶಿಕ್ಷಣ ಪಡೆದ ಇವರು ಧೈರ್ಯಶಾಲಿ ಹಾಗೂ ಸಾಮಾಜಿಕ ಕಾಳಜಿಯುಳ್ಳ ಮಹಿಳೆಯಾಗಿದ್ದರು. ಕಾನೂನು ಪದವಿ ಪಡೆದ ಇವರು ಸಮಾಜ ಸೇವೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರು. ಬಾಲ್ಯದಿಂದಲೇ ದೇಶ ಭಕ್ತಿಯ ವಿಚಾರಧಾರೆಯನ್ನು ಮೈಗೂಡಿಸಿಕೊಂಡಿದ್ದ ಇವರು ಸ್ವಾತಂತ್ರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬ್ರಿಟಿಷ್ ವಿರುದ್ಧದ ಪ್ರತಿಭಟನೆಗಳಲ್ಲಿ ಪಾಲ್ಗೊಂಡು, ಬಂಧಿತರಾದ ಯುವಕರಿಗೆ ಸಹಾಯ ಮಾಡಿದರು. ದೇಶಪರ ಹಲವು ಸಂಘಟನೆಗಳಲ್ಲಿ ತೊಡಗಿಕೊಂಡು ದೇಶಭಕ್ತರ ಹಾಗೂ ಕ್ರಾಂತಿಕಾರರ ಸಹಾಯಕ್ಕೆ ಮುಂದಾದರು. ಮಹಿಳೆಯರನ್ನು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮುಂಚೂಣಿಯಲ್ಲಿ ಬರಲು ಸಕ್ರಿಯವಾಗಿ ಭಾಗವಹಿಸಬೇಕೆಂದು ಪ್ರೇರೇಪಿಸಿದರು. ಸ್ವಾತಂತ್ರ್ಯ ನಂತರ ಇವರು ತಮ್ಮ ರಾಜಕೀಯ ಸೇವೆ ಮುಂದುವರಿಸಿಕೊಂಡು

ಹಲವು ಜನಪರ ಕಾರ್ಯಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡರು.

**ಬೀದರ್ ನ ಸೈದಾಬಿ:**

20ನೇ ಶತಮಾನದ ಆರಂಭದಲ್ಲಿ ಬೀದರ್ ಜಿಲ್ಲೆಯಲ್ಲಿ ಒಂದು ಸಾಮಾನ್ಯ ಕುಟುಂಬದಲ್ಲಿ ಇವರ ಜನನವಾಯಿತು. ಅಲ್ಪ ಶಿಕ್ಷಿತಳಾದರೂ ಬಾಲ್ಯದಿಂದಲೇ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಖಂಡಿಸುತ್ತಾ, ದೇಶಭಕ್ತಿಯ ಧೋರಣೆಗಳನ್ನು ಮೈಗೂಡಿಸಿಕೊಂಡಿದ್ದರು. ಸೈದಾಭಿಯವರು ಬೀದರ್ ಪ್ರದೇಶದಲ್ಲಿ ನಡೆದಂತಹ ಹೈದರಾಬಾದ್ ಮುಕ್ತಿ ಚಳುವಳಿಯಲ್ಲಿ ( Hyderabad Liberation Movement ) ಪ್ರಮುಖ ಪಾತ್ರ ವಹಿಸಿದ್ದರು. ಆಗ ಬೀದರ್ ನಿಜಾಮರ ಆಳ್ವಿಕೆಯ ಅಡಿಯಲ್ಲಿತ್ತು. ನಿಜಾಮರು ಬೀದರ್ ಅನ್ನು ಭಾರತ ಒಕ್ಕೂಟದಲ್ಲಿ ಸೇರಿಸಲು ವಿರೋಧ ವ್ಯಕ್ತಪಡಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಸೈದಾಭಿಯವರು ಸ್ಥಳೀಯ ಮಹಿಳೆಯರನ್ನೆಲ್ಲ ಒಗ್ಗೂಡಿಸಿಕೊಂಡು, ನಿಜಾಮರ ಪರವಾಗಿದ್ದ ಸೈನ್ಯ ಹಾಗೂ ಪೊಲೀಸರ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆಯನ್ನು ನಡೆಸಿದರು. ತಮ್ಮ ಕಾರ್ಯದಿಂದ ಬಂಧನಕ್ಕೆ ಒಳಗಾದರೂ ಪುನಃ ಪುನಃ ಬೀದರ್ ಜಿಲ್ಲೆಯ ಗ್ರಾಮಗಳಲ್ಲಿ ಸಂಚರಿಸಿ, ಅಲ್ಲಿಯ ಮಹಿಳೆಯರಿಗೆ ದೇಶಭಕ್ತಿ, ಸ್ವಾತಂತ್ರ್ಯ, ಸಮಾನತೆಯ ಕುರಿತು ಜಾಗೃತಿ ಮೂಡಿಸಿದರು. ಇವರ ಈ ಸಾಹಸ ಕಾರ್ಯದಿಂದ ಬೀದರ್ನಲ್ಲಿ ಅನೇಕ ಮಹಿಳೆಯರು ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಳ್ಳಲು ಕಾರಣವಾಯಿತು.

**ಮೆಣಸಿನಾಳ ತಿಮ್ಮನಗೌಡರ ಪತ್ನಿ ಶಾರದಮ್ಮ:**

ಗಾಂಧೀಜಿಯ ಚಳುವಳಿಗಳಿಗೆ ಸಹಕಾರ ನೀಡಿ, ಗ್ರಾಮೀಣ ಮಹಿಳೆಯರಲ್ಲಿ ಸ್ವದೇಶಿ ಚಿಂತನೆ ಬೆಳೆಸಿದವರು. ಇವರಂತೆ ಹೊನ್ನಮ್ಮ ದೇವಿ, ಅಕ್ಕಮ್ಮ ನಾಯ್ಕ, ಶಾಂತಮ್ಮ ನಾಯಕಿ, ಶಾಂತಾಬಾಯಿ ಭಟ, ಸವಿತಾ ಬಾಯಿ ದೇಶಪಾಂಡೆ, ಲಕ್ಷ್ಮೀಬಾಯಿ ಹುನಸಗಿ, ಗೌರಮ್ಮ ಕಲ್ಲೂರ, ರಾಮಾಬಾಯಿ ಗೋವಿಂದರಾಜು.. ಮೊದಲಾದವರು ಮಹಿಳಾ ಮಂಡಳಿ, ವಿದ್ಯಾರ್ಥಿನಿ ಸಂಘಗಳ ಮೂಲಕ ತಮ್ಮ ದೇಶಭಕ್ತಿಯನ್ನು ಪ್ರಚುರಪಡಿಸಿದರು.

**ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮುಂಬೈ ಕರ್ನಾಟಕದ ಮಹಿಳೆಯರು ಅನುಭವಿಸಿದ ಯಾತನೆಗಳು:**

ಭಾರತೀಯ ಮಹಿಳೆಯರು ಸಮಾಜದ ಕಟ್ಟಲೆಗಳನ್ನು ಮೀರಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಅರ್ಪಿಸಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಈ ಹೋರಾಟದಲ್ಲಿ ನೋವು, ಅವಮಾನಗಳಿಂದ ಕೂಡಿದ ಕಠಿಣ ಅನುಭವಗಳು ಎದುರಾದವು. ಅವರು ರಾಜಕೀಯವಾಗಿ, ಸಾಮಾಜಿಕವಾಗಿ ಅನೇಕ ಸಂಕಟಗಳನ್ನು ಎದುರಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಬಂಧಿತರಾದ ಮಹಿಳೆಯರಿಗೆ ಆಹಾರ, ನೀರು ಮತ್ತು ವೈದ್ಯಕೀಯ ನೆರವು ಸಕಾಲದಲ್ಲಿ ಸಿಗದೇ, ಅಸ್ವಸ್ಥತೆಯನ್ನು ಎದುರಿಸಬೇಕಾಯಿತು. ಶಾರೀರಿಕ ಹಿಂಸೆಯನ್ನು ಅನುಭವಿಸಿದರು. ಕುಟುಂಬದ ಸದಸ್ಯರು ಬಂಧಿತರಾದಾಗ ಅಥವಾ ಹೋರಾಟದಲ್ಲಿ ಮನೆ ಸದಸ್ಯರನ್ನು ಕಳೆದುಕೊಂಡಾಗ, ಮನೆ ನಿರ್ವಹಣೆಯ ಜವಾಬ್ದಾರಿ ಹೊರಬೇಕಾಯಿತು. ಸಮಾಜದ ನಿಂದನೆ, ತಿರಸ್ಕಾರವನ್ನು ಎದುರಿಸಿ, ಆತಂಕ, ಭಯ, ಕಳವಳವನ್ನು ಅನುಭವಿಸಿದರು.

ಸಂಪ್ರದಾಯಬದ್ಧ ಸಾಮಾಜಿಕ ಕಟ್ಟಲೆಗಳಿಂದ ಹೊರ ಬಿದ್ದು ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರನ್ನು ಅಸಭ್ಯರು, ಬಂಡಾಯಗಾರರು ಎಂಬಂತೆ ಬಿಂಬಿಸಿ, ಸಾಮಾಜಿಕವಾಗಿ ಅವರನ್ನು ದೂರವಿಟ್ಟರು. ಅನೇಕ ಮಹಿಳೆಯರು ತಮ್ಮ ಕುಟುಂಬದಿಂದಲೇ

ವಿರೋಧವನ್ನು ಎದುರಿಸಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಮನೆ ನಿರ್ವಹಣೆ, ಮಕ್ಕಳ ಪಾಲನೆಯಲ್ಲಿ ಅಸ್ತವ್ಯಸ್ತವಾಯಿತು. ಉದ್ಯೋಗವಿಲ್ಲದೆ, ಆದಾಯದ ಮೂಲವಿಲ್ಲದೆ, ಮನೆ ಖರ್ಚುಗಳನ್ನು ನಿಭಾಯಿಸುವಲ್ಲಿ ಸಂಕಷ್ಟ ಎದುರಿಸಿದರು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರು ಅನುಭವಿಸಿದ ಈ ಯಾತನೆಗಳು ಅವರು ದೇಶಕ್ಕಾಗಿ ಮಾಡಿದ ತ್ಯಾಗದ ಪ್ರತೀಕಗಳಾಗಿದ್ದವು. ಮಹಿಳೆಯರ ಸಹನಶೀಲತೆ, ಧೈರ್ಯ, ತ್ಯಾಗದ ಮನೋಭಾವವೇ ನಮ್ಮ ದೇಶದ ಸ್ವಾತಂತ್ರ್ಯದ ಬಲವಾದ ಅಸ್ತ್ರಗಳಾಗಿದ್ದವು.

**ಉಪಸಂಹಾರ:**

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮುಂಬೈ ಕರ್ನಾಟಕದ ಮಹಿಳೆಯರು ದೇಶ ಪ್ರೇಮ, ಧೈರ್ಯ ಹಾಗೂ ತ್ಯಾಗದ ಪ್ರತೀಕಗಳು. ಸಾಮಾಜಿಕ ಜಾಗೃತಿಯ ಬೆಳವಣಿಗೆಗೆ ಕಾರಣರಾಗಿ, ಸ್ವಾವಲಂಬನೆಯ ಆದರ್ಶಕ್ಕೆ ಮುಂದಡಿಯಿಟ್ಟರು. ಅನೇಕ ಮಹಿಳಾ ಶಿಕ್ಷಣ ಸಂಸ್ಥೆಗಳ ಪ್ರಾರಂಭಕ್ಕೆ ಕಾರಣರಾಗಿ, ಮಹಿಳಾ ಸಬಲೀಕರಣಕ್ಕೆ ಪ್ರೇರಣೆಯಾದರು. ತಮ್ಮ ಕೆಚ್ಚೆದೆಯ ಹೋರಾಟದಿಂದ ಹಾಗೂ ಸೇವಾ ಮನೋಭಾವದ ಮೂಲಕ ಸಮಾಜದ ಪರಿವರ್ತನೆಗೆ ಕಾರಣಿಭೂತರಾದರು. ಇಂತಹ ಮಹಿಳೆಯರ ಧೈರ್ಯ ಮತ್ತು ಶಕ್ತಿ ಮುಂದಿನ ಪೀಳಿಗೆಗಳಿಗೆ ಪ್ರೇರಣೆಯಾದವು. ಜನರಲ್ಲಿ ದೇಶಭಕ್ತಿ ಹಾಗೂ ಏಕತೆಯ ಸಂದೇಶ ಹರಿಸುವಲ್ಲಿ ಮುಂಬೈ ಕರ್ನಾಟಕದ ಮಹಿಳೆಯರ ಪಾತ್ರ ವಿಶಿಷ್ಟವಾದುದು. ಹಾಗೆಯೇ ಸಾಮಾಜಿಕ, ರಾಜಕೀಯ ಕ್ರಾಂತಿಗೆ ಇವರು ದಾರಿದೀಪವಾದರು.

**ಪರಾಮರ್ಶನ ಗ್ರಂಥಗಳು:**

1. ಕನ್ನಡ ಕೆರಿಯರ್ ಇಂಡಿಯಾ international Women's Day 2022: inspirational quotes for women in Kannada

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.